# ಬೆರೆಕೆ ಸೊಪ್ಪಿನ ಅಡಕಚಿಟ್ಟಿನ ಬಳ್ಳಿ



ಚಿತ್ರಬರಹ:
**ಚನ್ನರಾಜ್ ಎಲ್.ಸಿ.**

ಪೂರ್ವ ಮುಂಗಾರಿನ ರೇವತಿ, ಅಶ್ವಿನಿ, ಭರಣಿ ಮಳೆಗಳು ಭೂಮಿಯನ್ನು ಅಪ್ಪುತ್ತಿದ್ದಂತೆಯೇ ಒಂದೆರೆಡು ತಿಂಗಳಲ್ಲಿ ಹತ್ತಾರು ಜಾತಿಯ ಹುಲ್ಲು, ಗಿಡ, ಮರ, ಬಳ್ಳಿಗಳು ಭೂಮಿಗೆ ಹಸಿರು ಹೊದಿಕೆಯನ್ನು ಹೊದಿಸುತ್ತವೆ. ಇಂತಹ ಗಿಡ ಮರ ಬಳ್ಳಿಗಳಲ್ಲಿ ಬೆರೆಕೆ ಸೊಪ್ಪಿನ ಅಡಕಚಿಟ್ಟಿನ ಬಳ್ಳಿಯೂ ಒಂದು.

ಕನ್ನಡದಲ್ಲಿ ಅಡಕಚಿಟ್ಟಿನ ಗಿಡ, ಅಡಕಪುಟ್ಟಿನ ಗಿಡ, ಕೊಮ್ಮೆ ಗಿಡ, ನಡು ಮುರುಕನ ಬಳ್ಳಿ; ಸಂಸ್ಕೃತದಲ್ಲಿ ರಕ್ತಪುನರ್ನವ, ಹಿಂದಿಯಲ್ಲಿ ಗಧವರ್ಣ, ತಮಿಳಿನಲ್ಲಿ ಮುಕ್ಕಾರತ್ತೈ, ತೆಲುಗಿನಲ್ಲಿ ಅಟ್ಟಿಡ ಮಾಮಿಡಿ– ಎಷ್ಟೊಂದು ಹೆಸರುಗಳು! ಇಂಗ್ಲಿಷ್‌ನಲ್ಲಿ ಸ್ಪ್ರೆಡ್ಡಿಂಗ್ ಹಾಗ್ ವೀಡ್ ಎನ್ನುತ್ತಾರೆ. ನಿಕ್ಟಾಜಿನೇಸಿ ಸಸ್ಯ ಕುಟುಂಬಕ್ಕೆ ಸೇರಿರುವ ಅಡಕಚಿಟ್ಟಿನ ಬಳ್ಳಿಯ ವೈಜ್ಞಾನಿಕ ಹೆಸರು ಬೊರ್ ಹ್ಯಾವಿಯ ಡಿಫ್ಯೂಸ್. ಡಚ್ ಸಸ್ಯ ವಿಜ್ಞಾನಿ ಹರ್‌ಮನ್ ಬೊರ್ ಹ್ಯಾವಿಯ ಅವರ ಹರ್‌ಮನ್ ಬಿಟ್ಟು ಬೊರ್ ಹ್ಯಾವಿಯ ಹೆಸರನ್ನು ನಾಮಕರಣ ಮಾಡಲಾಗಿದೆ.

ಬೇಸಿಗೆಯಲ್ಲಿ ಮಂಪರಿನಲ್ಲಿರುವ ಅಡಕಚಿಟ್ಟಿನ, ಗೆಣಸಿನಂತಹ ಬೇರುಗಳಿಂದ ಚಿಗರುಗಳು ಮೂಡಿ ಹತ್ತಾರು ಬಳ್ಳಿಗಳ ರೂಪ ತಳೆದು ನೆಲದ ಮೇಲೆ ಹರಡಿಕೊಳ್ಳುತ್ತದೆ. ಬಳ್ಳಿಯ ಪ್ರತಿ ಗಿಣ್ಣಿನ ಮೇಲೆ ಅಂಡಾಕಾರದ ಎಲೆಗಳು ಮತ್ತು ಹೊಸ ಚಿಗುರು ಬಳ್ಳಿಗಳು ಅಭಿಮುಖವಾಗಿ ಜೋಡಣೆಯಾಗಿರುತ್ತವೆ. ಎಲೆಗಳ ಕಂಕುಳಲ್ಲಿ ಹೂವುಗಳು ಗುಂಪು ಗುಂಪಾಗಿರುತ್ತವೆ. ಬಳ್ಳಿಗಳು ದುಂಡಾಗಿದ್ದು ಬೆಳದಂತೆಲ್ಲ ನಾರಿನಿಂದ ಕೂಡಿ ಗಟ್ಟಿಯಾಗುತ್ತವೆ. ಮಾರ್ಚಿನಿಂದ ಡಿಸೆಂಬರ್ ವರೆಗೆ ಹಸಿರಾಗಿದ್ದು, ಬೇಸಿಗೆಯಲ್ಲಿ ಮೌನ ಮಂಪರಿಗೆ ಜಾರುತ್ತವೆ.

ಗ್ರಾಮೀಣ ಮಹಿಳೆಯರಿಗೆ ಇದು ಚಿರಪರಿಚಿತ ಬಳ್ಳಿ. ಮುಂಗಾರಿನಿಂದ ಹಿಂಗಾರು ಮಳೆಯವರೆಗೆ ಅಡಕಚಿಟ್ಟು ಬಳ್ಳಿಯ ಎಳೆ ಚಿಗುರು, ಕುಡಿ ಮತ್ತು ಎಲೆಗಳ ಜೊತೆಗೆ, ದಾಗಡಿ, ಕಾರೆಕುಡಿ, ಕುಂಬಳದ ಕುಡಿ ಎಲೆಗಳು ಮತ್ತು ಕಾಡು ಸಬ್ಬಕ್ಕಿ ಸೊಪ್ಪಿನ ಜೊತೆ ಬೆರೆಸಿ ಬೆರೆಕೆ ಸೊಪ್ಪಿನ ಬಸ್ಸಾರನ್ನು ವಿಶೇಷವಾಗಿ ಮಾಡುತ್ತಾರೆ.

ಅಡಕಚಿಟ್ಟಿನ ಬೇರು, ಸೊಪ್ಪು ಮತ್ತು ಬಳ್ಳಿಯ ಕಾಂಡವನ್ನು ಆಯುರ್ವೇದ, ನಾಟಿ ವೈದ್ಯ ಪದ್ದತಿಗಳಲ್ಲಿ ವಿಷ ಕೀಟಗಳ ಕಡಿತ, ಚರ್ಮ ಕಾಯಿಲೆ, ಮಲಬದ್ದತೆ, ಜಾಂಡೀಸ್, ಅಧಿಕ ರಕ್ತದ ಒತ್ತಡ, ರಕ್ತಹೀನತೆಯ ಚಿಕಿತ್ಸೆಗಳಲ್ಲಿ ವ್ಯಾಪಕವಾಗಿ ಬಳಸಲಾಗುತ್ತದೆ. ಅಡಕಚಿಟ್ಟಿನ ಬಳ್ಳಿಯ ಔಷಧ ಗುಣಗಳ ಮಹತ್ವವನ್ನು ಬಲ್ಲ ಪೂರ್ವಿಕರು ಬೆರೆಕೆ ಸೊಪ್ಪುಗಳ ಮೂಲಕ ದಿನನಿತ್ಯದ ಅಹಾರದಲ್ಲಿ ಬಳಸುತ್ತಿದ್ದರು.



